## ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಢಾಧಿಕಾರಿಯವರ ನ್ಯಾಯಾಲಯ, ಹುಣಸೂರು

## ಸಿ.ಸಿ. ಸಂಖ್ಯೆಃ 163/2024

## ದಿನಾಂಕ 30.06.2025

ಫಿರ್ಯಾದಿದಾರರುಃ ಸರ್ಕಾರದ ಪರ ಹುಣಸೂರು ಗ್ರಾಮಾಂತರ
ಪೊಲೀಸ್ ಠಾಣೆ, ಹುಣಸೂರು,
ಮೈಸೂರು ಜಿಲ್ಲೆ.

ವಿರುದ್ಧ,

ಎ 1. ಶ್ರೀ ರಾಜೇಶ ಬಿನ್ ರವಿ ಆಚಾರ್,
ವಯಸ್ಸು 38 ವರ್ಷ,
ವಾಸಃಕಲ್ಲಹಳ್ಳಿ, ಗ್ರಾಮ,
ಹನಗೋಡು ಹೋಬಳಿ
ಹುಣಸೂರು ತಾಲ್ಲೂಕು,
ಮೈಸೂರು ಜಿಲ್ಲೆ.

ವಿರುದ್ದ

ಆರೋಪಿ ಎ 2. ಶ್ರೀಮತಿ ಶೃತಿ ಕೋಂ ಕುಮಾರ,
ವಯಸ್ಸು 40 ವರ್ಷ,
ಸಾಕೇತ ಬಡವಾಣೆ,
(ಪೊಲೀಸ್ ರವಿ ಮನೆ ಹತ್ತಿರ)
ಛಾಯದೇವಿ ಸ್ಕೂಲ್ ಹತ್ತಿರ,
ಹುಣಸೂರು ಟೌನ್,
ಮೈಸೂರು ಜಿಲ್ಲೆ.

ಪ್ರಸ್ತುತ ವಾಸಃ ಹಳೇಯೂರು ಗ್ರಾಮ,
ಚುಂಚನಕಟ್ಟೆ ಹೋಬಳಿ,
ಕೆ ಆರ್ ನಗರ ತಾಲ್ಲೂಕು,
ಮೈಸೂರು ಜಿಲ್ಲೆ.

## ಆಪಾದನೆ

ಶ್ರೀಮತಿ. ಆಯಿಶಾಬಿ .ಪಿ. ಮಜೀದ್, ಬಿ.ಎ., ಎಲ್.ಎಲ್.ಬಿ., ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಹುಣಸೂರು ಆದ ನಾನು ಆರೋಪಿಯಾದ ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆಃ

ಫಿರ್ಯಾದಿ ಮತ್ತು ನೀವು ಪರಿಚಯಸ್ಥರಾಗಿದ್ದು ಸದರಿ ಪರಿಚಯದ ಆಧಾರದ ಮೇಲೆ ಆರೋಪಿಯಾದ ನೀವು ಫಿರ್ಯಾದಾರರಿಂದ ನಿಮ್ಮ ದರದು ನಿಮಿತ್ತ ಅಂದರೆ ಹಳೆಯ ಸಾಲದ ತಿರುವಳಿಗಾಗಿ ಮತ್ತು ಗೃಹಕೃತ್ಯದ ಖರ್ಚಿಗಾಗಿ ರೂ.**2,00,000/-**ಗಳನ್ನು 12 ತಿಂಗಳೊಳಗಾಗಿ ಮರುಪಾವತಿ ಮಾಡುವುದಾಗಿ ಒಪ್ಪಿ ಸಾಲವನ್ನು ಪಡೆದುಕೊಂಡಿರುತ್ತೀರಿ. ನೀವು ಒಪ್ಪಿಕೊಂಡಂತೆ ಹಣ ಪಾವತಿಸಲು ಕೇಳಿಕೊಂಡಾಗ ಆರೋಪಿಯಾದ ನೀವು ನಿಮ್ಮ ಖಾತೆಯಿರುವ ನವನಗರ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್, ಹುಣಸೂರು ಶಾಖೆಯ ಉಳಿತಾಯ ಖಾತೆ ಅಕೌಂಟ್ **ನಂಃ 8042012104611** ರಲ್ಲಿನ ಚೆಕ್ ಸಂಖ್ಯೆಃ **062019 ರ** ಚೆಕ್ ಗೆ ಸಹಿ ಮಾಡಿ **ದಿನಾಂಕಃ 08.12.2023** ರಂದು ಚೆಕ್ಕನ್ನು ನೀಡಿ **ರೂ.2,00,000/**-ಗಳನ್ನು ದಿನಾಂಕಃ**18.12.2023 ರಂದು** ಚೆಕ್ ಮೂಲಕ ಪಡೆಯುವಂತೆ ತಿಳಿಸಿ ಆರೋಪಿಯಾದ ನೀವು ಫಿರ್ಯಾದುದಾರರಿಗೆ ನೀಡಿರುತ್ತೀರಿ. ನಂತರ ಪಿರ್ಯಾದುದಾರರು ಸದರಿ ಚೆಕ್ಕನ್ನು ಹುಣಸೂರು ತಾಲ್ಲೂಕು, ಕಲ್ಲಹಳ್ಳಿ ಶಾಖೆಯ ಇಂಡಿಯನ್ ಓವರ್ಸೀಸ್ ಬ್ಯಾಂಕಿನ ತಮ್ಮ ಖಾತೆಗೆ ಜಮಾ ಮಾಡಲು ಸಲ್ಲಿಸಿದಾಗ ಸದರಿ ಬ್ಯಾಂಕ್‌ನವರು “**Funds Insufficient**’

ಎಂಬ ಹಿಂಬರಹದೊಂದಿಗೆ ದಿನಾಂಕಃ **13.12.2023** ರಂದು ಮರಳಿ ಚೆಕ್ಕನ್ನು ಫಿರ್ಯಾದುದಾರರಿಗೆ ಹಿಂದಿರುಗಿಸಿರುತ್ತಾರೆ.

2. ನೀವು ಫಿರ್ಯಾದುದಾರರಿಗೆ ನೀಡಿದ ಚೆಕ್ಕು ನಗಧೀಕರಣವಾಗದೇ ಇರುವ ಕಾರಣ ನೀವು ನೀಡಬೇಕಾಗಿದ್ದ **ರೂ.2,00,000/- ಗಳನ್ನು** ಒತ್ತಾಯಿಸಿದರೂ ಸಹಾ ನೀವು ಮರು ಪಾವತಿ ಮಾಡಿರುವುದಿಲ್ಲ, ಹಾಗೂ ಫಿರ್ಯಾದುದಾರರು ಅವರ ವಕೀಲರ ಮೂಲಕ ಸದರೀ ಹಣವನ್ನು ಮರುಪಾವತಿ ಮಾಡುವಂತೆ ದಿಃ **28.12.2023** ರಂದು ಲೀಗಲ್ ನೋಟೀಸ್ ನ್ನು ನೋಂದಾಯಿತ ಅಂಚೆ ಮುಖಾಂತರ ಕಳುಹಿಸಿದ್ದು, ಸದರಿ ನೋಟೀಸ್ ದಿಃ **02.01.2024** ರಂದು ಜಾರಿಯಾಗಿರುತ್ತದೆ.

ನೀವು ಈ ರೀತಿ ಮಾಡಿರುವುದು ನೆಗೋಷಿಯಬಲ್ ಇನ್ಸ್ಟ್ರುಮೆಂಟ್ ಕಾಯಿದೆ 138 ರ ಅಡಿಯಲ್ಲಿ ಶಿಕ್ಷಾರ್ಹವಾದ ಅರಪಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಎಸಗಿರುತ್ತೀರಿ?

## <u>ಆರೋಪಿಯ ಹೇಳಿಕೆ</u>

ಪ್ರಶ್ನೆಃ- ನಿಮಗೆ ಓದಿ ಹೇಳಿದ ಅಪಾದನೆ ತಿಳಿಯಿತೆ?

ಉತ್ತರಃ-

ಪ್ರಶ್ನೆಃ- ತಪ್ಪನ್ನು ಒಪ್ಪಿಕೊಳ್ಳುವಿರಾ? ಅಥವಾ ವಿಚಾರಣೆಯಾಗಬೇಕೆ?
ಉತ್ತರಃ-

ಆರೋಪಿತನಿಗೆ ಮೇಲ್ಕಂಡ ಆಪಾದನೆಯನ್ನು ಓದಿ ಹೇಳಿ ವಿವರಿಸಿದ ನಂತರ ಆತನು ನೀಡಿದ ಸರಿಯಾದ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಅಭಿಲೇಖಿಸಿಕೊಳ್ಳಲಾಗಿದೆ.

ಪ್ರಧಾನ **ಸಿವಿಲ್ ಜಡ್ಜ್ ಮತ್ತು ಪ್ರದನ್ಯಾ.ದಂಡಾಧಿಕಾರಿಗಳು**
ಹುಣಸೂರು.

ಆರೋಪಿ ಸಹಿಃ